## 'ಬದುಕು ಜಟಕಾ ಬಂಡಿ' ಕಗ್ಗದ ಕವಿ ಶ್ರೀ ಡಿ.ವಿ.ಗುಂಡಪ್ಪನವರಿಗೆ ನಮಿಸುತ್ತ ಎರಡು ಮಾತು...

ಬೃಂದಾವನ ಅಭಿಮಾನಿ ತಂಡ, ತನ್ನ ಮೂರನೆಯ ಸಾಹಿತ್ಯ ಬೃಂದಾವನದ ಸಂದಭ  ದಲ್ಲಿ, ಅಮೇರಿಕ ಕನ್ನಡಿಗರ ಲೇಖನಗಳನ್ನು ಆಧರಿಸಿದ ಪುಸ್ತಕವೊಂದನ್ನು ಬಿಡುಗಡೆ ಮಾಡಬೇಕು ಎಂದೆನಿಸಿ, ನಮ್ಮೊಳಗೆ ಚಚಿ  ಸಿದಾಗ ಬಂದ ಪ್ರಶ್ನೆ ಯಾವ ವಿಷಯದ ಮೇಲೆ ಪುಸ್ತಕ ರಚಿಸುವುದು ಎಂದು. ಆಗ ಸ್ನೇಹಿತರಾದ ಡಾ. ರುದ್ರಕುಮಾರ  ವರು ಸಲಹೆ ಮಾಡಿದ ವಿಷಯ ಬದುಕು ಜಟಕಾ ಬಂಡಿ ದಾಶ  ನಿಕ, ಕವಿ, ಶ್ರೀ ಡಿ.ವಿ. ಗುಂಡಪ್ಪನವರ ಸವ  ಕಾಲಿಕ ಸತ್ಯ. ಅವರ ಬದುಕು ಜಟಕಾ ಬಂಡಿ ಎಂಬ ಮಂಕುತಿಮ್ಮನ ಕಗ್ಗ ಈ ಪರಿಕಲ್ಪನೆಯಲ್ಲಿ ಪುಸ್ತಕ ರಚಿಸುವುದು ಎಂದು ತೀಮಾ  ನಿಸಿದೆವು. ಎಲ್ಲರ ಬದುಕಿನಲ್ಲಿ ಹಲವಾರು ವಿಶೇಷ ಘಟನೆಗಳು ನಡೆದೇ ಇರುತ್ತವೆ. ಆ ಅನುಭವಗಳ ಸಂದೇಶಗಳನ್ನು ಪೋಣಿಸಿದಾಗ ಅದೊಂದು ಸುಂದರ ಸರಮಾಲೆಯಾದೀತು ಎಂದೆನಿಸಿತು. ಈ ಪುಸ್ತಕದ ಯೋಜನೆಯನ್ನು ಕೈಗೆತ್ತಿಕೊಂಡಾಗ ದೊರೆತದ್ದೇ ಬದುಕಿನ ಅನುಭವಗಳ ಸರಮಾಲೆ ಬದುಕು ಒಂದು ಜಟಕಾ ಬಂಡಿ. ಈ ಪುಸ್ತಕದಲ್ಲಿ ಹಲವು ಲೇಖಕರ ಅನುಭವಗಳು, ಅವುಗಳ ಸಂದೇಶಗಳಿವೆ. ಈ ಅನುಭವಗಳಲ್ಲಿ ಲೇಖಕ ನಾಯಕನೋ, ನಾಯಕಿಯೋ ಆಗಿದ್ದಾರು ಅಥವಾ ಅದೊಂದು ಮತ್ತೋವ  ರ ಅನುಭವವಾದೀತು. ಒಟ್ಟಾರೆ ಈ ಅನುಭವಗಳೆಲ್ಲ ಜೀವನಕ್ಕಾಗಿ ಸಂದೇಶವೊಂದನ್ನು ಹುಟ್ಟು ಹಾಕಿದ್ದೀತು. ನಾವು ಈಗಾಗಲೇ ಬೃಂದಾವನ ವಾಣಿಗಾಗಿ ಪ್ರಕಟಿಸಿದ ಹಲವಾರು ಸಾಧಕರ ಸಂದಶ  ನಗಳನ್ನು ಇಲ್ಲಿರುವ ಅನುಭವಗಳ ಸರಮಾಲೆಯ ಜೊತೆ ಸೇರಿಸಿದ್ದು, ಈ ಪುಸ್ತಕದ ಬಾಹುಳ್ಯ ಆಳ ಹೆಚ್ಚಿಸಿದೆ.

ಇನ್ನುಳಿದಂತೆ ಹೊಸ ಲೇಖಕರ ಲೇಖನಗಳಿಗೆ ಒತ್ತು ಕೊಟ್ಟು ಈ ಪುಸ್ತಕದಲ್ಲಿ ಸೇರಿಸಿದ್ದೇವೆ.

ಹಿರಿಯ ಕವಿ ಶ್ರೀ ನಿಸಾರ್ ಅಹಮದ್ ನ್ಯೂಜೆಸಿ  ಗೆ ಬಂದಾಗ, ಪ್ರಸ್ತಾಪ ಮತ್ತು ಬೃಂದಾವನದ ಆಶ್ರಯದಲ್ಲಿ ಕಾವ್ಯ-ಗೀತೆ ಕಾಯ  ಕ್ರಮವನ್ನು ಏಪ  ಡಿಸ ಲಾಗಿತ್ತು. ಶ್ರೀ ನಿಸಾರ್ ಅಹಮದ್ರವರು ತಮ್ಮ ಇತರ ಕವನಗಳ ಜೊತೆ 'ಕುರಿಗಳು ಸಾರ್ ಕುರಿಗಳು' ಕವನ ಓದಿದರು. ಶ್ರೀಮತಿ ಅನಿತಾ ಅನಂತಸ್ವಾಮಿ ತಮ್ಮ ತಂದೆಯವರು ಸಂಗೀತ ನೀಡಿದ ಆ ಹಾಡನ್ನು ಮನಸ್ಸು ತುಂಬುವಂತೆ ಹಾಡಿದರು. ಆಗ ಪರಿಚಯವಾದ ಶ್ರೀ ನಿಸಾರ್ ಅಹಮದ್ರವರ ಸರಳತನ, ಮನುಷ್ಯರ ಮೇಲಿನ ಅಗಾಧ ಪ್ರೀತಿ, ಕಳಕಳಿ ನಮ್ಮೆಲ್ಲರ ಮನದಲ್ಲಿ ಅಚ್ಚಳಿಯದೇ ಉಳಿದಿದೆ. ಈ ಪುಸ್ತಕಕ್ಕಾಗಿ ಮುನ್ನುಡಿ ಬರೆಯಲು ಕೇಳಿದಾಗ ತಮ್ಮ ಬಿಡುವಿಲ್ಲದ ಕಾಯ  ಕ್ರಮಗಳ ಮಧ್ಯ ಪ್ರೀತಿಯಿಂದ ಮುನ್ನುಡಿ ಬರೆದು ಕೊಟ್ಟರು. ಸಾಹಿತ್ಯದ ಬರವಣಿಗೆಯಲ್ಲಿ ಪ್ರಾಥಮಿಕ ಹಂತಗಳಲ್ಲಿರುವ ಅನೇಕ ಲೇಖಕರಿಗೆ, ಅವರ ಮುನ್ನುಡಿ ಮತ್ತೆ ಮತ್ತೆ ಬರೆಯುವಂತೆ ಉತ್ತೇಜನ ನೀಡಿತು. ಕವಿ ಶ್ರೀ ನಿಸಾರ್ ಅಹಮದ್ ಬರೆದು ಕಳುಹಿಸಿದ ಮುನ್ನುಡಿಯನ್ನು ಅವರದೇ ಹಸ್ತಾಕ್ಷರದಲ್ಲಿ ಯಥಾವತ್ತಾಗಿ ಪ್ರಕಟಿಸಿದ್ದೇವೆ. ಸಾಹಿತ್ಯ ಬೃಂದಾವನ ಅವರಿಗೆ ತುಂಬು ಹೃದಯದ ಕೃತಜ್ಞತೆ ಸಲ್ಲಿಸುತ್ತದೆ.

ಬೃಂದಾವನದ ಮೊದಲ ಸಾಹಿತ್ಯ ಬೃಂದಾವನವನ್ನು ಉದ್ಘಾಟಿಸಿದ ಶ್ರೀ ಹೊಸೂರು ನಟರಾಜ್, ಶ್ರೀ ಶ್ರೀವತ್ಸ ಜೋಶಿ ಮತ್ತು ನ್ಯೂ ಜೆಸಿ  ಯ ಪ್ರಸ್ತಾಪದ ಸ್ನೇಹಿತರಿಗೆಲ್ಲ ನಮ್ಮ ವಂದನೆಗಳು. ಅವರು ಪ್ರೀತಿಯಿಂದ ತಮ್ಮ ಎರಡು ಮಾತುಗಳನ್ನು ಬರೆದುಕೊಟ್ಟಿದ್ದಾರೆ. ಅವರ ಸ್ನೇಹಪರ ಮಾತುಗಳಿಗೆ ನಾವು ಆಭಾರಿ. ಅಮೇರಿಕಾದಲ್ಲಿರುವ ಸಾಹಿತ್ಯಾಸಕ್ತ ಕನ್ನಡಿಗರಿಗೆಲ್ಲ ದಿವಂಗತ ಶ್ರೀ ಹರಿಹರೇಶ್ವರರ ಹೆಸರು ತಿಳಿದೇ ಇರುತ್ತದೆ. ಅವರ ಕನ್ನಡದ ಮೇಲಿನ ಪ್ರೀತಿ, ಹೊಸಬರಿಗೆ ಕನ್ನಡ ಬರೆಯಲು ಅವರು ಪ್ರೋತ್ಸಾಹಿಸುತ್ತಿದ್ದ ಕಳಕಳಿ ಹೊರನಾಡ ಕನ್ನಡಿಗರಿಗೆಲ್ಲ ಮಾಗ  ದಶ  ಕ. ಇಂತಹ ಅಮರ

ಕನ್ನಡಿಗರೊಬ್ಬರಿಗೆ ಈ ಪುಸ್ತಕವನ್ನು ಅಪ  ಣೆ ಮಾಡುತ್ತಿದ್ದೇವೆ. ಅವರು ಹೊರನಾಡಿನಲ್ಲಿ ಕನ್ನಡಕ್ಕಾಗಿ ಮಾಡಿದ ಕೆಲಸ ಎಲ್ಲರಿಗೂ ಸ್ಫೂತಿ  ಯಾಗಲಿ.

ಪುಸ್ತಕ ಪ್ರಕಟಣೆಯಲ್ಲಿ ಸ್ನೇಹಿತ ಟೋಟಲ್ ಕನ್ನಡದ ಮಾಲೀಕರಾದ ಲಕ್ಷ್ಮೀಕಾಂತ್ ದೊಡ್ಡ ಮನಸ್ಸಿನಿಂದ ಸಂಪೂಣ   ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಅಮೇರಿಕದಿಂದ ಭಾರತಕ್ಕೆ ತೆರಳಿ ಟೋಟಲ್ ಕನ್ನಡ ಸ್ಥಾಪಿಸಿ ಕನ್ನಡಕ್ಕಾಗಿ ಶ್ರಮಿಸುತ್ತಿರುವ ಅವರ ಸಾಧನೆ ನಿಜಕ್ಕೂ ಶ್ಲಾಘನೀಯ. ಪುಸ್ತಕಕ್ಕಾಗಿ ಒಂದು ಚೆಂದದ ರಕ್ಷಾಪುಟ ಬೇಕೆಂದು ಯೋಚಿಸುತ್ತಿದ್ದಾಗ ಪರಿಚಯವಾದವರೇ ಶಿಡ್ಲಘಟ್ಟದಲ್ಲಿರುವ ಅಜೀತ ಕೌಂಡಿಲ್ಯ. ತಮ್ಮ ಮೊದಲ ಪ್ರಯತ್ನದಲ್ಲಿಯೇ ರಚಿಸಿದ ರಕ್ಷಾಪುಟದ ಮಾದರಿ ಎಲ್ಲರ ಮನಗೆದ್ದಿತು. ಸುಂದರ ರಕ್ಷಾಪುಟ ರೂಪಿಸಿಕೊಟ್ಟ ಅಜೀತ್ ಅವರಿಗೆ ನಮ್ಮ ಕೃತಜ್ಞತೆಗಳು. ಅಚ್ಚುಕಟ್ಟಾಗಿ ಪುಟವಿನ್ಯಾಸಗೊಳಿಸಿದ ಹೊಸಪೇಟೆಯ ಯಾಜಿ ಪ್ರಕಾಶನದ ಸವಿತಾ ಯಾಜಿ ಮತ್ತು ಗಣೇಶ್ ಯಾಜಿಯವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಈ ಪುಸ್ತಕಕ್ಕಾಗಿ ನಾವು ಬೃಂದಾವನ ವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಹಲವಾರು ಭಾಗಗಳನ್ನು ಆರಿಸಿಕೊಂಡಿದ್ದೇವೆ. ಬೃಂದಾವನ ವಾಣಿಯ ಎಲ್ಲ ಸದಸ್ಯರಿಗೂ ಹೃತ್ಪೂವ  ಕ ನಮನಗಳು.

ಈ ಪುಸ್ತಕಕ್ಕಾಗಿ ಲೇಖನಗಳನ್ನು ಬರೆದ ಎಲ್ಲ ಲೇಖಕರಿಗೂ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ಬಹಳಷ್ಟು ಲೇಖಕರು, ಸಾಕಷ್ಟು ಶ್ರಮಪಟ್ಟು ಈ ಲೇಖನಗಳನ್ನು ಬರೆದಿದ್ದಾರೆ. ಖಂಡಿತವಾಗಿ ಇದು ಹೀಗೇ ಮುಂದುವರಿದುಕೊಂಡು ಹೋಗಲಿ ಅವರೆಲ್ಲ ತಮ್ಮದೇ ಆದ ಪುಸ್ತಕ ಹೆಚ್ಚು ಹೆಚ್ಚು ಲೇಖನಗಳನ್ನು ಪ್ರಕಟಿಸಲಿ ಎಂದು ಹಾರೈಸುತ್ತೇವೆ.

ಈ ಯೋಜನೆಯ ಹಿಂದೆ ಬೃಂದಾವನ ಅಭಿಮಾನಿ ತಂಡವಿದೆ. ವಿಶ್ವಸ್ಥ ಮಂಡಳಿಯಿದೆ. ಈ ಪುಸ್ತಕದ ಯೋಜನೆಯನ್ನು ಅವರ ಮುಂದೆ ಇಟ್ಟಾಗ, ಅವರು ಸಂತಸದಿಂದ ಪೂಣ   ಜವಾಬ್ದಾರಿಯನ್ನು ನಮಗೆ ಒಪ್ಪಿಸಿದ್ದಾರೆ. ಅವರ ನಂಬಿಕೆಗೆ ನಾವು ಆಭಾರಿ.

ಈ ತಣ್ಣನೆ ಹೊತ್ತಿನಲ್ಲಿ ನೆನೆಸಿಕೊಳ್ಳಬೇಕಾದ ಮತ್ತೊಂದು ಹೆಸರು ಪದ್ಮ ಚಿಕ್ಕೇರೂರ್. ಬೆಂಗಳೂರಿನ ಪ್ರತಿಷ್ಠಿತ ವಿದ್ಯಾವಧ  ಕ ಶಾಲೆ ಯಲ್ಲಿ ಮೂರು ದಶಕಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಸಾವಿರಾರು ಮಕ್ಕಳಿಗೆ ವಿದ್ಯಾಜ  ನೆ ಮಾಡಿ, ಮೂರು ಬಾರಿ 'ಉತ್ತಮ ಶಿಕ್ಷಕಿ' ಪ್ರಶಸ್ತಿಯನ್ನು ಪಡೆದಿದ್ದಾರೆ. ವಿದ್ಯಾಥಿ  ಗಳು ಗುರುಗಳ ಬಗ್ಗೆ ಬರೆದ ಲೇಖನಗಳನ್ನು ಈವರೆಗೆ ನಾವು ನೋಡಿದ್ದೆವು, ಆದರೆ ವಿದ್ಯಾಥಿ  ಗಳ ಬಗ್ಗೆ ಹೆಮ್ಮೆಯಿಂದ ಬರೆದ ಇವರ 'ಹೊನ್ನ ಹೂಗಳು' ಪುಸ್ತಕವೇ ಇವರ ಮಾತೃ ವಾತ್ಸಲ್ಯಕ್ಕೆ ಸಾಕ್ಷಿ. ಅಪಾರ ಅನುಭವ ಮತ್ತು ಪಾಂಡಿತ್ಯವುಳ್ಳ ಇವರು ನಮ್ಮ 'ಬದುಕು ಜಟಕಾ ಬಂಡಿ' ಚಟುವಟಿಕೆಗಳಿಗೆ ಬಂಡೆಯಂತೆ ಆಸರೆಯಾಗಿ ಅವರ ಪತಿ ಗಣೇಶಮೂತಿ   ಚಿಕ್ಕೇರೂರು ನೆನಪಲ್ಲಿ ತನು, ಮನ, ಧನ ಸಹಾಯ ಮಾಡಿದ್ದಾರೆ, ಅವರಿಗೆ ಬೃಂದಾವನ ಸಾಹಿತ್ಯ ಬಳಗ ಎಂದಿಗೂ ಅವರಿಗೆ ಚಿರಋಣಿ.

ಈ ಯೋಜನೆ ಹೀಗೇ ಮುಂದುವರಿದು ಸಾಹಿತ್ಯ ಬೃಂದಾವನದ ಆಶ್ರಯದಲ್ಲಿ ಇನ್ನೂ ಹೆಚ್ಚು ಹೆಚ್ಚು ಪುಸ್ತಕಗಳು ಪ್ರಕಟವಾಗಲಿ ಎಂದು ಹಾರೈಸುತ್ತೇವೆ.

**ಸಂಪಾದಕ ವಗ**

**ಸಾಹಿತ್ಯ ಬೃಂದಾವನ, ಬೃಂದಾವನ ಕನ್ನಡ ಕೂಟ**

**ನ್ಯೂ ಜೆಸಿ**

# ಪರಿಚಯ: ಗಣೇಶಮೂರ್ತಿ ಚಿಕ್ಕೇರೂರು – ಪದ್ಮ ಚಿಕ್ಕೇರೂರ್



ಈ ದಂಪತಿಗಳು ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿ ಮಿಂದವರು.  ಹಲವು ಬಾರಿ ಅಮೇರಿಕಾ ಪ್ರವಾಸ ಮಾಡಿರುವ ಇವರಿಗೆ ಇಲ್ಲಿಯ ಭಾರತೀಯರ ಹಾಗು ಕನ್ನಡ ಭಾಷೆಯ ಬಗ್ಗೆ ಒಲವು ಹೆಚ್ಚು. ಉತ್ತರ ಕನಾ  ಟಕದವರಾದ ಗಣೇಶಮೂತಿ   ಚಿಕ್ಕೇರೂರು ಅವರು ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಅಕೌಂಟ್ಸ್ ಆಫೀಸರ್ ಆಗಿ ಸೇವೆ ಸಲ್ಲಿಸಿದ್ದಾರೆ.  ಜೀವನದ ಸಾಥ  ಕತೆಗೆ ಅವಶ್ಯಕವಾಗಿ ಬೇಕಾಗಿರುವ, ಧಾಮಿ  ಕ ಕಾಯ  ಗಳು, ತೀಥ  ಯಾತ್ರೆ ಮುಂತಾದ ಸತ್ಕಾಯ  ಗಳನ್ನು ಮಾಡಿ, ಸಂತೃಪ್ತಿ ಪಡೆದಿದ್ದಾರೆ.  ಚಿಕ್ಕೇರೂರು ದಂಪತಿಗಳು ತಮ್ಮ ವೈವಾಹಿಕ ಜೀವನದ ಸುವಣ ಸೇತುವೆಯನ್ನು ದಾಟಿದ ಸಂದಭ  ದಲ್ಲಿ ಬಳಗ ಕೂಟ ದವರಿಂದ ಸನ್ಮಾನಿತರಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ.  ವೃತ್ತಿಯಲ್ಲಿ ಒಳ್ಳೆ ಹೆಸರು ಪಡೆದ ಚಿಕ್ಕೇರೂರು ಅವರಿಗೆ ಅಧ್ಯಾತ್ಮದತ್ತ ಒಲವು ಹೆಚ್ಚು, ಧಾಮಿ  ಕತೆಯಲ್ಲಿ ಹೆಚ್ಚು ಆಸಕ್ತಿ.  ಒಟ್ಟಾರೆ, ಈ ದಂಪತಿಗಳ ಮನೋ ಧಮ  ವು ಒಂದೇ ಆಗಿದ್ದುದಕ್ಕೆ ಅವರ ಸುಂದರ ಸಂಸಾರವೇ ಸಾಕ್ಷಿಯಾಗಿದೆ. ಪದ್ಮ ಚಿಕ್ಕೇರೂರ್ ಅವರು ತಮ್ಮ ಸಾಧನೆಗೆ ಯಜಮಾನರ ಪ್ರೋತ್ಸಾಹವೇ ಕಾರಣವೆಂದು ಬಹಳ ವಿನಯದಿಂದ ತಿಳಿಸಿದ್ದಾರೆ.